Tumbe International e-Magazine
ISSN : 2581-7728
A Multilanguage Magazine
Issue-2
Volume-5
July-Dec: 2022

# ನಮ್ಮ ಸಂವಿಧಾನದಲ್ಲಿ ಏನಿದೆ?

**ಪುನೀತ್ ನಾಯಕ್ ಎಂ**
I B.Sc II Semester
U11GT21S0502
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು
puneethnayakm9632@gmail.com Mob:9632051833




ಪ್ರಸ್ತುತ ಭಾರತದ ಸಂವಿಧಾನವು 25 ಭಾಗಗಳು, 470 ಅನುಚ್ಛೇದಗಳು ಮತ್ತು 12 ಅನುಸೂಚಿಗಳನ್ನು ಒಳಗೊಂಡಿದೆ. ಒಂದೊಂದು ಅಧ್ಯಾಯದಲ್ಲೂ ಹಲವು ಅನುಚ್ಛೇದಗಳಿವೆ. ಪ್ರತಿಯೊಂದು ಅಧ್ಯಾಯದಲ್ಲೂ ಪ್ರತ್ಯೇಕ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿದೆ.

| **ಅಧ್ಯಾಯ** | **ಅನುಚ್ಛೇದಗಳು** | **ವಿಷಯ** |
|---|---|---|
| 1 | 1 - 4 | ಒಕ್ಕೂಟ ಮತ್ತು ಅದರ ರಾಜ್ಯ ಕ್ಷೇತ್ರ |
| 2 | 5 - 11 | ನಾಗರಿಕತ್ವ |
| 3 | 12 - 35 | ಮೂಲಭೂತ ಹಕ್ಕುಗಳು |
| 4 | 36 - 51 | ರಾಜ್ಯನೀತಿಯ ನಿರ್ದೇಶಕ ತತ್ವಗಳು |
| 4ಎ | 51ಎ | ಮೂಲಭೂತ ಕರ್ತವ್ಯಗಳು |
| 5 | 52 – 151 | ಒಕ್ಕೂಟದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ |
| 6 | 152 – 237 | ರಾಜ್ಯಗಳು, ವಿಧಾನಮಂಡಲ, ಉಚ್ಚನ್ಯಾಯಾಲಯಗಳು, ಸರ್ಕಾರ |

| | | |
|---|---|---|
| 7 | 238 | ಮೊದಲನೆ ಅನುಸೂಚಿಯ 'ಬಿ' ಭಾಗದಲ್ಲಿರುವ ರಾಜ್ಯಗಳು |
| 8 | 239 - 242 | ಒಕ್ಕೂಟ ರಾಜ್ಯಕ್ಷೇತ್ರಗಳು |
| 9 | 243 - 243ಬಿ | ಪಂಚಾಯಿತಿಗಳು ಮತ್ತು ಪೌರಸಭೆಗಳು |
| 10 | 244 - 244ಎ | ಅನುಸೂಚಿತ ಮತ್ತು ಬುಡಕಟ್ಟಿನ ಪ್ರದೇಶಗಳು |
| 11 | 245 - 263 | ಒಕ್ಕೂಟ ಮತ್ತು ರಾಜ್ಯಗಳ ನಡುವಿನ ಸಂಬಂಧಗಳು |
| 12 | 264 - 300ಎ | ಹಣಕಾಸು, ಸ್ವತ್ತು, ಕರಾರುಗಳು ಮತ್ತು ದಾವೆಗಳು |
| 13 | 301 - 307 | ಭಾರತ ರಾಜ್ಯಕ್ಷೇತ್ರದೊಳಗೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ |
| 14 | 308 - 323 | ಒಕ್ಕೂಟದ ಮತ್ತು ರಾಜ್ಯಗಳ ಅಧೀನದಲ್ಲಿನ ಸೇವೆಗಳು |
| 14ಎ | 323ಎ - 323ಬಿ | ನ್ಯಾಯಾಧಿಕರಣಗಳು |
| 15 | 324 - 329ಎ | ಚುನಾವಣೆಗಳು |
| 16 | 330 - 342 | ಬುಡಕಟ್ಟು, ಆಂಗ್ಲೋ-ಇಂಡಿಯನ್ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು |
| 17 | 343 - 351 | ರಾಜ್ಯಭಾಷೆ, ಪ್ರಾದೇಶಿಕ ಭಾಷೆ, ನ್ಯಾಯಾಲಯಗಳ ಭಾಷೆ |
| 18 | 352 - 360 | ತುರ್ತು ಪರಿಸ್ಥಿತಿ |
| 19 | 361 - 367 | ಸಂಕೀರ್ಣ / ಇತರೆ |
| 20 | 368 | ಸಂವಿಧಾನ ತಿದ್ದುಪಡಿ |
| 21 | 369 - 392 | ತಾತ್ಕಾಲಿಕ, ಮಧ್ಯಕಾಲೀನ ಮತ್ತು ವಿಶೇಷ ಉಪಬಂಧಗಳು |
| 22 | 393 - 395 | ಹೆಸರು, ಅನುಷ್ಠಾನ ಮತ್ತು ಹಿಂದಿನ ಶಾಸನಗಳ ರದ್ಧತಿ |

**ನಮ್ಮ ಸಂವಿಧಾನ 12 ಅನುಸೂಚಿಗಳನ್ನು ಹೊಂದಿದ್ದು, ಒಂದೊಂದು ಅನುಸೂಚಿಯು ಪ್ರತ್ಯೇಕ ವಿಷಯದ ಬಗ್ಗೆ ಪ್ರಾಸ್ತಾಪಿಸಿದೆ. ಅವುಗಳ ವಿವರಗಳು**:

| **ಅನುಸೂಚಿಗಳು** | **ವಿಷಯ** |
|---|---|
| ಮೊದಲನೇ ಅನುಸೂಚಿ | ರಾಜ್ಯಗಳು ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳು |
| ಎರಡನೇ ಅನುಸೂಚಿ | ರಾಷ್ಟ್ರಾಧ್ಯಕ್ಷರು, ರಾಜ್ಯಪಾಲರು, ಲೋಕಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ವಿಧಾನಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರಿಗೆ ಸಂಬಂಧಿಸಿದ ಉಪಬಂಧಗಳು |
| ಮೂರನೇ ಅನುಸೂಚಿ | ಪ್ರಮಾಣವಚನಗಳ ಅಥವಾ ಪ್ರತಿಜ್ಞಾವಿಧಿಗಳ ನಮೂನೆಗಳು |
| ನಾಲ್ಕನೇ ಅನುಸೂಚಿ | ರಾಜ್ಯಸಭೆಯ ಸ್ಥಾನಗಳ ಹಂಚಿಕೆ |
| ಐದನೇ ಅನುಸೂಚಿ | ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳು |
| ಆರನೇ ಅನುಸೂಚಿ | ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ರಾಜ್ಯಗಳ ಬುಡಕಟ್ಟು ಪ್ರದೇಶಗಳ ಆಡಳಿತ |

| | |
|---|---|
| ಏಳನೇ ಅನುಸೂಚಿ | ಒಕ್ಕೂಟ ಪಟ್ಟಿ, ರಾಜ್ಯಪಟ್ಟಿ ಮತ್ತು ಸಮವರ್ತಿ ಪಟ್ಟಿ |
| ಎಂಟನೇ ಅನುಸೂಚಿ | ಭಾಷೆಗಳು |
| ಒಂಭತ್ತನೇ ಅನುಸೂಚಿ | ಕೆಲವು ಅಧಿನಿಯಮಗಳನ್ನು ಮತ್ತು ರೆಗ್ಯುಲೇಷನ್‌ಗಳನ್ನು ಮಾನ್ಯ ಮಾಡುವುದು |
| ಹತ್ತನೇ ಅನುಸೂಚಿ | ಪಕ್ಷಾಂತರದ ಕಾರಣದಿಂದ ಉಂಟಾಗುವ ಅನರ್ಹತೆಗೆ ಸಂಬಂಧಿಸಿದ ಉಪಬಂಧಗಳು |
| ಹನ್ನೊಂದನೇ ಅನುಸೂಚಿ | ಪಂಚಾಯತಿಗಳ ಅಧಿಕಾರ, ಪ್ರಾಧಿಕಾರ ಮತ್ತು ಜವಾಬ್ದಾರಿಗಳು ಇತ್ಯಾದಿ |
| ಹನ್ನೆರಡನೇ ಅನುಸೂಚಿ | ಪೌರಸಭೆಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು ಇತ್ಯಾದಿ |

**ಭಾರತದಲ್ಲಿ ಸಂವಿಧಾನವೇ ಸರ್ವೋಚ್ಚವಾದದು. ನಮ್ಮ ಸಂವಿಧಾನದ ಮೂಲಭೂತ ತತ್ವಗಳು, ಆಶಯಗಳು ಮತ್ತು ಸಿದ್ದಾಂತಗಳನ್ನು ಸಾರಾಂಶ ರೂಪದಲ್ಲಿ ತಿಳಿಸುವ ಪೀಠಿಕೆಯನ್ನು ಸಂವಿಧಾನದ ಪ್ರಸ್ತಾವನೆ (**Preamble**) ಎಂದು ಕರೆಯಲಾಗಿದೆ.**

**"ಭಾರತದ ಜನತೆಯಾದ ನಾವು,**
**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ,**
**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ;**
**ಭಾರತದ ಎಲ್ಲ ನಾಗರಿಕರಿಗೆ**
**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;**
**ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು**
**ಉಪಾಸನೆಯ ಸ್ವಾತಂತ್ರ್ಯವನ್ನು;**
**ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು**
**ದೊರೆಯುವಂತೆ ಮಾಡುವುದಕ್ಕಾಗಿ;**
**ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ**
**ಸಹೋದರ ಭಾವನೆಯನ್ನು ಮೂಡಿಸುವುದಕ್ಕೆ**
**ದೃಢ ಸಂಕಲ್ಪ ಮಾಡಿ,**
**ನಮ್ಮ ಸಂವಿಧಾನ ಸಭೆಯಲ್ಲಿ**
**1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು**
**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**
**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ".**

ಈ ಪ್ರಸ್ತಾವನೆಯ ಮೂಲಕ ತಿಳಿಯಪಡಿಸುವ ತತ್ವಗಳೆಂದರೆ, ಜನರೇ ಅಧಿಕಾರದ ಮೂಲ. ಭಾರತ ಒಂದು ಸ್ವತಂತ್ರವಾದ ಸಾರ್ವಭೌಮ ರಾಷ್ಟ್ರ ಅದೊಂದು ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕವಾದ ಗಣರಾಜ್ಯ, ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ದೊರಕಿಸಿಕೊಡುವುದು ನಮ್ಮ ಗುರಿ. ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ (ಶ್ರದ್ಧೆ) ಹಾಗೂ ಉಪಾಸನೆಯ ಸ್ವಾತಂತ್ರ್ಯವನ್ನು ನೀಡುವುದು, ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಸ್ಥಾನಮಾನವನ್ನು ಕಲ್ಪಿಸುವುದು: ವ್ಯಕ್ತಿ ಗೌರವ ಮತ್ತು ಸಹೋದರತೆಯನ್ನು ಬೆಳೆಸುವುದು, ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ನಮ್ಮ ಆದ್ಯ ಕರ್ತವ್ಯ.